

# ಹೇಗೆ ಅಕ್ಬರ ಮತ್ತು ಮೇವಾ ಗೆಳೆಯರಾದರು




ಹೇಗೆ ಅಕ್ಬರ ಮತ್ತು ಮೇವಾ ಗೆಳೆಯರಾದರು




ಒಂದಾನೊಂದು ಕಾಲದಲ್ಲಿ ಅಕ್ಷರ ಎನ್ನುವ ಬಾಲಕನಿದ್ದ ಅವನು ತಾಯಿ ತಂದೆಯರೊಂದಿಗೆ ಸಂತೋಷವಾಗಿದ್ದ. ಆ ಒಂದು ಘಟನೆ ನಡೆಯುವವರೆಗೆ ಶಾಲೆಗೆ ಹೋಗುತ್ತಾ ಗೆಳೆಯರೊಂದಿಗೆ ಆಟವಾಡುತ್ತಾ ತಾಯಿ ತಂದೆಯರೊಡನೆ ಸಂತೋಷವಾಗಿದ್ದ.



ಆ ರೀತಿಯ ಘಟನೆಗಳು ಪ್ರಾರಂಭವಾದ ಮೇಲೆ ಅವರ ಜೀವನದಲ್ಲಿ ಬಹಳ ಬದಲಾವಣೆಗಳಾಯಿತು. ಆ ಘಟನೆ ಹೇಗೆಂದರೆ ಬೆಳಿಗ್ಗೆ ಎದ್ದಾಕ್ಷಣ ಆಕಾಶದಲ್ಲಿ ದೊಡ್ಡ ಶಬ್ದದೊಡನೆ ಬೆಂಕಿಯ ಉಂಡೆಗಳು ಕಾಣಿಸುತ್ತಿದ್ದವು. ಆ ಜೋರಾದ ಢಂ ಢಂ ಶಬ್ದದಿಂದ ಭಯಗೊಂಡ ಎಲ್ಲರೂ ಮನೆಯಿಂದ ಹೊರಗೆ ಬರುತ್ತಿರಲಿಲ್ಲ. ಮಕ್ಕಳು ಶಾಲೆಗೂ ಹೋಗುತ್ತಿರಲಿಲ್ಲ. ಕಾಲ ಕ್ರಮೇಣ ಜನರು ಮನೆಯನ್ನು ತೊರೆದು ಬೇರೆ ಊರುಗಳಿಗೆ ವಲಸೆ ಹೋಗಲು ಪ್ರಾರಂಭಿಸಿದರು. ಅವನ ಗೆಳೆಯರೆಲ್ಲರೂ ಊರನ್ನು ತೊರೆದು ಕೆಲವರು ಚಂಢಿಗಡ, ದೆಹಲಿ, ಹಿಮಾಚಲ ಪ್ರದೇಶ ಮತ್ತು ಪಂಜಾಬಿನ ಪ್ರಾಂತ್ಯಗಳೆಡೆಗೆ ನಡೆದರು.




ಅಕ್ಬರ ಈಗ ಒಂಟಿಯಾದ. ಅಕ್ಬರನಿಗೆ ಇದೇ ರೀತಿ ನಾವು ಮನೆಯನ್ನು ಬಿಡಬೇಕಾದರೆ ಎಂಬ ಚಿಂತೆ ಕಾಡಲು ಪ್ರಾರಂಭವಾಯಿತು.




ಒಂದು ದಿನ ಮುಂಜಾನೆ ಬಹುಜೋರಾದ ಬಾಂಬಿನ ಶಬ್ದದಿಂದ ಅಕ್ಬರನಿಗೆ ತುಂಬಾ ಭಯವಾಯಿತು. ಅವನು ಒಂದು ಮೇಜಿನ ಕೆಳಗೆ ಅವಿತುಕೊಂಡನು. ಭಯದಿಂದ ಹೊರಗೆ ಬರಲು ನಿರಾಕರಿಸಿದನು.




ಸುಮಾರು ಎರಡು ಗಂಟೆಗಳ ತಾಯಿಯ ಸಮಾಧಾನದಿಂದ ಅವನು ಹೊರಗೆ ಒಣಗಿಹಾಕಿದ್ದ ಬಟ್ಟೆಗಳನ್ನು ತರಲು ಹೋದನು.



ಭಯದಿಂದ ಬಾಗಿಲು ತೆರೆದೊಡನೆ ಒಂದು ಉದ್ದ ಕೂದಲಿನ ಕಂದು ಬಣ್ಣದ ಬೆಕ್ಕನ್ನು ಕಂಡನು. ಅದಕ್ಕೆ ದಪ್ಪಗಿನ ದಟ್ಟ ಕೂದಲಿನ ಬಾಲವಿತ್ತು. ಅವಳ ಮೂಗಿನ ಪಕ್ಕದಲ್ಲಿ ಸ್ವಲ್ಪ ಬಿಳಿಯಾಗಿತ್ತು. ಅವಳು ಬಹಳ ಶಾಂತಿಯಿಂದ ಬಾಗಿಲ ಮೆಟ್ಟಿಲಿನ ಮೇಲೆ ಕುಳಿತಿದ್ದಳು.




ಆದರೆ ಅವಳು ಅಕ್ಬರನನ್ನು ನೋಡಿದ ಕೂಡಲೆ ಓಡಿ ಹೋದಳು. ಅದೇ ರೀತಿ ಕೆಲವು ದಿನ ಅವಳು ಅಕ್ಬರನನ್ನು ಕಂಡೊಡನೆ ಓಡಿ ಹೋಗುತ್ತಿದ್ದಳು.




ಆದರೆ ಅವಳು ಅಲ್ಲೇ ಇರುತ್ತಿದ್ದಳು. ಅಕ್ಬರನಿಗೆ ಕಾಣಿಸುವಾಗ ಅವಳು ಕೊಳಕಾಗಿ ಹಸಿದವಳಂತೆ ಸೊರಗಿದಂತೆ ಕಾಣುತ್ತಿದ್ದಳು. ಆದರೆ ಅವಳ್ಯಾವತ್ತು ಹಸಿದವಳಂತೆ ಮಿಯ್ಯಾಂ ಮಿಯ್ಯಾಂ ಎನ್ನುತ್ತಿರಲಿಲ್ಲ. ಆದರೆ ಯಾಕೆ ಅವಳು ಯಾವಾಗಲೂ ನನ್ನ ಕಂಡರೆ ಓಡುತ್ತಾಳೆ? ಹಾಗೂ ಮತ್ತೆ ಮತ್ತೆ ಬರುತ್ತಿರುತ್ತಾಳೆ. ಅವನಿಗೆ ಅನಿಸ್ತು (ತಿಳಿಯಿತು) ಅವಳೊಬ್ಬಳೆ ಒಂಟಿಯಾಗಿದ್ದಾಳೆ. ಅವಳು ಯಾರದಡೊನ ಇರಲು ಬಯಸುತ್ತಿರಬಹುದು ಎಂದು. ಅಂದರೆ ಅವಳೊಡನೆ ಆಡಲು ಯಾರಾದರು ಗೆಳೆಯರು ಸಿಗುತ್ತಾರೆ ಎಂದು. ಆದರೆ ಅವಳೊಡನೆ ಯಾವುದೇ ಬೆಕ್ಕಿನ ಗೆಳೆತನ ಯಾಕಿಲ್ಲ ಎನಿಸುತ್ತಿತ್ತು.




ಕೆಲವು ಬಾರಿ ಅವಳು ಕೋಪದಿಂದ ಅಕ್ಬರನನ್ನು ನೋಡುತ್ತಿದ್ದಾಳೆನಿಸುತ್ತಿತ್ತು. ಸ್ನೇಹವಾಗಿರಲು ಇಷ್ಟಪಡುತ್ತಿಲ್ಲವೆನಿಸುತ್ತಿತ್ತು. ಆದರೂ ಪ್ರಯತ್ನವನ್ನು ಬಿಡಲು ಅಕ್ಬರನಿಗೆ ಮನಸ್ಸಿರಲಿಲ್ಲ. ಅವಳು ನಮ್ಮದಳಾಗಬೇಕಾದರೆ ಏನು ಮಾಡಿದರೆ ಸರಿ?





ಅಕ್ಬರನು ಬಹಳ ಯೋಚಿಸಿದನು ನಂತರ ಬೆಕ್ಕಿಗೆ ಒಂದು ಹೆಸರನ್ನು ಕೊಡಬೇಕೆಂದು ಅವಳಿಗೆ ಮೇಹವಾ ಎಂದು ಕರೆಯಲು ನಿಶ್ಚಯಿಸಿದನು.







ಆದರೆ ಅಕ್ಷರನಿಗೆ ಯೋಚನೆ ಬರುತ್ತೆ ನಾವು ಯಾರನ್ನದರು ಪ್ರೀತಿಸಿದರೆ ವಿಶೇಷ ಗೌರವ ನೀಡಿದರೆ ಅವರು ನಮ್ಮವರಾಗುತ್ತಾರೆ ಎಂದು. ಅದೇ ರೀತಿ ಮೇವಾಹಳಿಗೆ ಏನಾದರೂ ಇಷ್ಟವಾಗುವಂತಹದ್ದನ್ನು ಮಾಡಬೇಕೆಂದು. ಆದುದರಿಂದ ಅವನು ಮೇವಾಹಳಿಗೆ ಹಾಲು ಮತ್ತು ಮೀನು, ಮತ್ತು ಬೇರೆ ರೀತಿಯ ಆಹಾರಗಳನ್ನು ರೊಟ್ಟಿ ಸೊಪ್ಪಿನ ಸಾರು (ಸೂಪ್) ಕೋಳಿ, ಕೇಕ್–ಮೇಹವಾ ಅವುಗಳೆಲ್ಲವನ್ನು ರುಚಿ ನೋಡಿ ತಿನ್ನದೆ ಬಿಡುತ್ತಿದ್ದಳು.




ಮುಂದೆ ಅವನು ಅವಳಿಗಿಷ್ಟವಾದ ಆಹಾರ ಯಾವುದೆಂದು ತಿಳಿಯಲು ಪ್ರಯತ್ನಪಟ್ಟು ಹಾಲು ಮತ್ತು ಮೀನನ್ನು ಕೊಟ್ಟಾಗ ಅವಳು ಹಸಿದಿರುವಂತೆ ಎಲ್ಲವನ್ನು ತಿನ್ನುತ್ತಿದ್ದಳು.



ಅಕ್ಬರ್ ಹೇಗಾದ್ರೂ ಮೇವಾಹಾ ಜೊತೆಗೆ ಸ್ನೇಹ ಬೆಳೆಸಬೇಕೆಂದು ಪಣತೊಟ್ಟಿದ್ದ. ಅವನ ಅಂಕಲ್ ತುಂಬಾ ಪಾಯಸ ತಂದಿದ್ದರು. ಅದಕ್ಕೆ ಅಕ್ಬರ್ ಪ್ರತಿದಿನವೂ ಮೇವಾಹಾ ಜೊತೆ ಪಾಯಸವನ್ನು ಹಂಚಿಕೊಂಡು ತಿನ್ನುತ್ತಿದ್ದನು. ಹೀಗೆ ಮಾಡುವಾಗ ಒಂದು ಬಾರಿ ಮೇವಾಹಾ ಅಕ್ಬರ್ ಹತ್ತಿರ ಬಂತು, ಅವನು ಅದನ್ನು ಎತ್ತಿಕೊಂಡನು. ಆದರೆ ಅದು ಭಯದಿಂದ ಅವನನ್ನು ಪರಚಿಕೊಂಡು ಓಡಿಹೋಯಿತು. ಅದನ್ನು ಹೇಗೆ ಸಂಭಾಳಿಸುವುದು ಎಂದು ಅವನಿಗೆ ಗೊತ್ತಿರಲಿಲ್ಲ. ಒಂದು ಕ್ಷಣದಲ್ಲಿ ಅವನಿಗೆ ನೋವಿನಿಂದ, ಮೇವಾಹಾಗೆ ತಿರುಗಿ ಹೊಡೆಯುವಷ್ಟು ಕೋಪ ಬಂದಿತ್ತು.



ಅಕ್ಬರ ಅವನಿಗೆ ನೀಡಿದ್ದ ಖೀರನ್ನು ಮೇಹವಾಳಿಗೂ ಕೊಡಬೇಕೆಂದು ಕೊಂಡನು. ಆದರೆ ಅವಳು ತಿನ್ನುತ್ತಾಳೊ ಇಲ್ಲವೊ ನೋಡಿಕೊಡಬೇಕೆಂದು ಕೊಂಡನು. ಅವನೊಂದಿಗೆ ಅವಳು ಸ್ನೇಹ ಮಾಡುತ್ತಾಳೆಂದರೆ ನಾಚಿ ಓಡುವುದಿಲ್ಲವೆಂದರೆ ಪಾಯಸವನ್ನು ಹಂಚಿ ತಿನ್ನಲು ಇಷ್ಟಪಟ್ಟನು(ಪಾಯಸವನ್ನು ಹಂಚಿ ತಿನ್ನೋನ ಅಂದುಕೊಂಡನು).




ಅಕ್ಬರನಿಗೆ ಮೇಹವಾಳು ತನ್ನ ಹತ್ತಿರ ಬರುವುದಿಲ್ಲವೆಂದು ತಿಳಿದು ಸಿಹಿಯನ್ನು ಚಿಕ್ಕ ತುಂಡು (ತುಣುಕು) ಗಳನ್ನಾಗಿ ಮಾಡಿ ಅವಳು ಕುಳಿತುಕೊಳ್ಳುವ ಜಾಗದಿಂದ ಸ್ವಲ್ಪ ಸ್ವಲ್ಪ ದೂರದಲ್ಲಿ ಅವನ ಮನೆಯ ಬಾಗಿಲಿನವರೆಗೆ ಇಟ್ಟನು. ಬಾಗಿಲಿನಲ್ಲಿ ನಿಶ್ಯಬ್ದವಾಗಿ ನಿಂತು ಕಾಯುತ್ತಿದ್ದನು.




ಮೇಹವಾ ಯಾವಾಗಿನಂತೆ ಬಂದು ಮೂಸಿ ಪಾಯಸದ ಚೂರನ್ನು ತಿನ್ನುತ್ತಾ ಅಕ್ಬರನ ಮನೆ ಬಾಗಿಲಿನವರೆಗೆ ಬಂದನು. ಮತ್ತು ಅವನಿಗೆ ತಿಳಿಯಿತು ಅವನಿಗಿಷ್ಟವಾದ ಪಾಯಸ ಮೇಹವಾಳಿಗೂ ಇಷ್ಟವಾಗುತ್ತದೆ ಎಂದು. ಅಕ್ಬರನು ಸಿಹಿಯನ್ನು ಅವನ ಬಾಗಿಲಿನವರೆಗೂ ಬರುವಂತೆ ಉದ್ದವಾಗಿ ಸ್ವಲ್ಪ ಸ್ವಲ್ಪವೇ ಗೆರೆಯಂತೆ ಇಟ್ಟನು. ಕೊನೆಯಲ್ಲಿ ಅವನ ಕೈಯಲ್ಲಿ ಒಂದು ಚೊಟ್ಟು ಇಟ್ಟುಕೊಂಡು ಬಾಗಿಲಿನ ಬಳಿ ಕುಳಿತನು. ಮೇಹವಾ ಎಲ್ಲವನ್ನೂ ತಿಂದು ಅವನ ಕೈಯ್ಯಲ್ಲಿರುವುದನ್ನು ತಿಂದು ಓಡಿ ಹೋದಳು. ಅವನಿಗೆ ಅನಿಸಿತ್ತು ಅವಳಿಗೆ ಇನ್ನೂ ನನ್ನ ಮೇಲೆ ನಂಬಿಕೆಯಿಲ್ಲವೇ? ನನ್ನೊಡನೆ ಸೇರಲು ಬಯಸುತ್ತಿಲ್ಲವೇ?



ಅಕ್ಬರ್ ಹೇಗಾದ್ರೂ ಮೇವಾಹಾ ಜೊತೆಗೆ ಸ್ನೇಹ ಬೆಳೆಸಬೇಕೆಂದು ಪಣತೊಟ್ಟಿದ್ದ. ಅವನ ಅಂಕಲ್ ತುಂಬಾ ಪಾಯಸ ತಂದಿದ್ದರು. ಅದಕ್ಕೆ ಅಕ್ಬರ್ ಪ್ರತಿದಿನವೂ ಮೇವಾಹಾ ಜೊತೆ ಪಾಯಸವನ್ನು ಹಂಚಿಕೊಂಡು ತಿನ್ನುತ್ತಿದ್ದನು. ಹೀಗೆ ಮಾಡುವಾಗ ಒಂದು ಬಾರಿ ಮೇವಾಹಾ ಅಕ್ಬರ್ ಹತ್ತಿರ ಬಂತು, ಅವನು ಅದನ್ನು ಎತ್ತಿಕೊಂಡನು. ಆದರೆ ಅದು ಭಯದಿಂದ ಅವನನ್ನು ಪರಚಿಕೊಂಡು ಓಡಿಹೋಯಿತು. ಅದನ್ನು ಹೇಗೆ ಸಂಭಾಳಿಸುವುದು ಎಂದು ಅವನಿಗೆ ಗೊತ್ತಿರಲಿಲ್ಲ. ಒಂದು ಕ್ಷಣದಲ್ಲಿ ಅವನಿಗೆ ನೋವಿನಿಂದ, ಮೇವಾಹಾಗೆ ತಿರುಗಿ ಹೊಡೆಯುವಷ್ಟು ಕೋಪ ಬಂದಿತ್ತು.








ಆದರೆ ಹೊಡೆಯದೆ ಕೋಪವನ್ನು ತಡೆದುಕೊಂಡ. ಆಮೇಲೆ ತನಗೆ ತಾನೇ ಹೇಳಿಕೊಂಡ “ನಾನು ದೊಡ್ಡವನು, ನನಗೆ ತುಂಬಾ ಭಾವನೆಗಳಿವೆ. ಆದರೆ ಅವಳು ತುಂಬಾ ಚಿಕ್ಕವಳು ಅದಕ್ಕೆ ಅವಳಿಗೆ ಬಯವಿದೆ” ಎಂದು.


ಸ್ವಲ್ಪ ಸಮಯದ ನಂತರ ನೋಡಿದಗ ಅವನ ಗಾಯಗಳು ಅಷ್ಟೊಂದು ಆಳವಾಗಿ/ದೊಡ್ಡದಾಗಿ ಇರಲಿಲ್ಲ ಹಾಗೂ ಅಷ್ಟೊಂದು ನೋವೂ ಇರಲಿಲ್ಲ.



ಕೊನೆಗೊಂದು ದಿನ ಮೇವಾಹಾಳು ಅಕ್ಬರನಿಗೆ ತನ್ನ ತಲೆಯನ್ನು ಸವರಲು ಬಿಟ್ಟಳು. ಅಕ್ಬರನಿಗೆ ತುಂಬಾ ಖುಷಿಯಾಯಿತು. “ಓಹ್, ಅದಕ್ಕೆ ಈಗ ನನ್ನ ಮೇಲೆ ನಂಬಿಕೆ ಬಂದಿದೆ. ನನ್ನನ್ನು ಅವಳ ಸ್ನೇಹಿತನೆಂದು ಹಾಗೂ ತನ್ನನ್ನು ನನ್ನ ಸ್ನೇಹಿತಳೆಂದು ಭಾವಿಸುತ್ತಿದ್ದಾಳೆ” ಎಂದ ಮನಸೊಳಗೆ ಯೋಚಿಸಿ ಖುಷಿಪಟ್ಟನು. ದಿನಕಳೆದಂತೆ ಅವಳು ಅವನಿಗೆ ತನ್ನ ತಲೆ ಸವರಲು ಬಿಡತೊಡಗಿದಳು ಹಾಗೂ ಇಬ್ಬರೂ ಹೆಚ್ಚು ಹೊತ್ತು ಒಟ್ಟಿಗೆ ಕಳೆಯ ತೊಡಗಿದರು. ಅವನು ಮಾತಾಡಿಸಿದಾಗಲೂ ಅವಳು ಹೆದರಿಕೊಂಡು ಓಡಲಿಲ್ಲ. ಆದರೆ ಆರ ನೇ ದಿನ ಅವಳು ಮೃದುವಾಗಿ ಮತ್ತು ಜೋರಾಗಿ ಮಿಯಾವ್ ಎಂದು ಹೇಳಿದ್ದು ತುಂಬಾ ಆಶ್ಚರ್ಯದ ಸಂಗತಿಯಾಗಿತ್ತು. ವ್ಹಾವ್ ಎಷ್ಟು ಒಳ್ಳೆಯ ಅನುಭವ, ಅವಳು ಈಗ ನನ್ನ ಜೊತೆ ಮಾತನಾಡಲು ತಯಾರಾಗುತ್ತಿದ್ದಾಳೆ ಎಂದು ಅಕ್ಬರ್ ಯೋಚಿಸಿದನು.




ದಿನ ಕಳೆದಂತೆ ಅವರ ಸ್ನೇಹ ಬೆಳೆಯಿತು. ಹೆಚ್ಚು ಸಮಯ ಕಳೆಯತೊಡಗಿದರು. ಕಡೆಗೊಂದು ದಿನ ಅವಳು ಅವನ ತೊಡೆಯ ಮೇಲೆ ನೆಗೆದು ಕುಳಿತು, ಬೆಚ್ಚಗೆ ಮಲಗಿದನು. ಅಕ್ಬರ್‌ಗೆ ಈಗ ಯಾವುದೇ ಭಯವಿರಲಿಲ್ಲ ಹಾಗೂ ಅವನಿಗೆ ಏಕಾಂಗಿ ಅನ್ನಿಸುತ್ತಿರಲಿಲ್ಲ. ಯಾಕೆಂದರೆ ಅವನಿಗೆ ಜೊತೆಯಾಗಿ ಮೇವಾಹಾ ಇದ್ದಳು.



ಅಕ್ಬರ್ ಮತ್ತು ಮೇವಾಹಾ ಒಳ್ಳೆಯ ಸ್ನೇಹಿತರಾದರು. ಮೇವಾಹಾ ತನ್ನ ಜೊತೆ ಇರಲು/ತನ್ನನ್ನು ನಂಬಲು ಏನು ಕಾರಣ? ಪಾಯಸವೇ? ಅವಳನ್ನು ಸಾಕುವ/ಸಹಾಯ
ಮಾಡಿದ ತನ್ನ ಕೈಗಳೇ? ಅವಳು ನನ್ನನ್ನು ಪರಚಿದರೂ ನಾನು ಮತ್ತು ಅವಳ ಜೊತೆಗೆ ಇರುತ್ತೇನೆ. ಏನೂ ಮಾಡುವುದಿಲ್ಲ ಎನ್ನುವ ನಂಬಿಕೆಯೇ? ಮೇವಾಹಾ ನನ್ನನ್ನು ನಂಬಿ ತ
ನ್ನ ಉಗುರುಗಳ ಒಳಗೆ ಇಟ್ಟುಕೊಳ್ಳುತ್ತಾಳೆಯೇ? ಎನ್ನುವ ಪ್ರಶ್ನೆಗಳು ಅವನ ತಲೆಯಲ್ಲಿ ಇದ್ದವು. ಆದರೆ ಇದಕ್ಕೆಲ್ಲ ಉತ್ತರ ಹುಡುಕುವುದು ಕಷ್ಟವಾಗಿತ್ತು. ಇಬ್ಬರ ಮಧ್ಯೆ ಸ್ನೇಹ
ಬೆಳೆಯಲು ಏನು ಕಾರಣ? _ಆದರೆ ಯಾವುದೇ ಸಂಬಂಧ ಬೆಳೆಯಲು ಸಮಯ ಮತ್ತು ಸಹನೆಯು ಇರಬೇಕು ಎಂಬ ಪಾಠವನ್ನು ಕಲಿತುಕೊಂಡನು.

Community Child & Adolescent Mental Health Service Project,
Department of Child & Adolescent Psychiatry,
National Institute of Mental Health & Neruosciences (NIMHANS)
(Institute Of National Importance)
Hosur Road, Bengaluru - 560029

Website : www.nimhans.ac.in
Email : capnimhans@gmail.com

Supported by the Dept. of Women and Child Development, Govt. of Karnataka

Design and Art work : SathishRam